# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ.ಸಿ. 910/2020

**ಪಿಡಬ್ಲೂ-1**

**ಸಿಡಬ್ಲೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಸತೀಶ ಬಾಬು |
| ತಂದೆಯ ಹೆಸರು | - | ಲೇಟ್ ರಂಗೇಗೌಡ |
| ವಯಸ್ಸು | - | 49 ವರ್ಷ |
| ಕೆಲಸ | - | ವ್ಯವಸಾಯ |
| ವಾಸ | - | ಹೆಬ್ಬಾಳು ಗ್ರಾಮ |

**ದಿನಾಂಕ 24-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ-2 ನನ್ನ ಅಣ್ಣ. ಚಾಸಾ-3 ರಿಂದ 9 ಗೊತ್ತು. ಆರೋಪಿತರು ಗೊತ್ತು. ದಿಃ 20-07-2019 ರಲ್ಲಿ ಗದ್ದೆಯಿಂದ ನಾನು ಸಮಯ 6.30 ಗಂಟೆ ಸಮಯದಲ್ಲಿ ಚಾಸಾ-2 ರವರಿಗೆ ಸೇರಿದ ವಾಹನ ಸಂಖ್ಯೆ ಕೆಎ 17 ವಿ 4457 ಸಿ ಟಿ 100 ನಲ್ಲಿ ಹೆಬ್ಬಾಳು ಬಳಿ ಬರುತ್ತಿದ್ದಾಗ ಎದುರುಗಡೆಯಿಂದ 1 ನೇ ಆರೋಪಿ ಸೋಮಶೇಖರ ತನ್ನ ವಾಹನ ಸಂಖ್ಯೆ ಕೆಎ 09- ಇ ಡಿ 0844 ಹಿರೋ ಹೊಂಡಾ ಬೈಕ್ ನಲ್ಲಿ ಬರುತ್ತಿದ್ದು ಚಾಸಾ-2 ರವರ ಬೈಕ್ ಗೆ ಗುದ್ದಿ ಅಪಘಾತ ಪಡಿಸಿರುತ್ತಾರೆ.

ನಂತರ 1ನೇ ಆರೋಪಿ ಚಾಸಾ-2 ರವರನ್ನು ಸ್ತ್ರೀ ಶಕ್ತಿ ಆಸ್ಪತ್ರೆ ಮೈಸೂರಿಗೆ ಕರೆದುಕೂಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿರುತ್ತಾರೆ. ನಂತರ ದಿಃ 22-07-2019 ರಂದು ಪೊಲೀಸ್ ಠಾಣೆಗೆ ತೆರಳಿ ನಾನು ದೂರನ್ನು ಕೊಟ್ಟಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸಾಕ್ಷಿಯು ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದೂರಾಗಿದ್ದು ಅದನ್ನು **ನಿಪಿ-1** ಎಂದು ಹಾಗೂ ಅದೇ ರೀತೀ ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ 4 ಬೈಕ್ ನ ಛಾಯಾ ಚಿತ್ರಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ದಿಃ 20-07-2019 ರಂದು ಸಂಜೆ 6.40 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿರುವಾಗ ಚಾಸಾ-3 ರವರು ನನಗೆ ದೂರವಾಣಿ ಕರೆ ಮಾಡಿ ಚಾಸಾ-2 ರವರು ಕಪ್ಪಡಿ ಕಡೆಯಿಂದ ಹೆಬ್ಬಾಳು ಕಡೆಗೆ ಸಂಜೆ 6.30 ಗಂಟೆ ಸಮಯದಲ್ಲಿ ಬರುತ್ತಿದ್ದಾಗ ಎದುರುಗಡೆಯಿಂದ 1ನೇ ಆರೋಪಿ ಸೋಮಶೇಖರ ಅತಿವೇಗ ಮತ್ತು ಅಜಾಗರೂಕತೆಯಿಂದ ತನ್ನ ಬೈಕ್ ನ್ನು ಓಡಿಸಿಕೊಂಡು ಬಂದು ಎದುರುಗಡೆಯಿಂದ ಬರುತ್ತಿದ್ದ ಚಾಸಾ-2 ರವರ ಬೈಕ್ ಗೆ ಡಿಕ್ಕಿ ಪಡಿಸಿದ್ದರಿಂದ ಚಾಸಾ-2 ರವರ ಬಲಗಾಲಿಗೆ ಏಟಾಗಿದೆ ಎಂದು ಮತ್ತು ಬೈಕ್ ಸಂಖ್ಯೆ ಕೆಎ 09-ಇಡಿ-844 ಹೀರೋ ಹೊಂಡಾ ಸ್ಪೆಂಡರ್ ಪ್ಲಸ್ ಬೈಕ್ ಆಗಿದ್ದು ಚಾಸಾ-2 ರವರ ಬೈಕ್ ಸಂಖ್ಯೆ ಕೆಎ 17 ಯು 4457 ಬಜಾಜ್ ಸಿ ಟಿಸಿ 100 ಎರಡೂ ವಾಹನಗಳನ್ನು ಅಪಘಾತ ಮಾಡಿದ ನಂತರ ಚಾಸಾ-2 ರವರನ್ನು ಆರೋಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ನಂತರ ನಾನು ಯಾವ ಆಸ್ಪತ್ರೆಯೆಂದು ವಿಚಾರ ಮಾಡಿದಾಗ ನಮ್ಮ ಅಣ್ಣನನ್ನು ಮೈಸೂರಿನ ಶಕ್ತಿ ಹಿಲ್ ವಿವ್ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆಯನ್ನು ಆರೋಪಿ ಕೊಡಿಸಿರುತ್ತಾರೆ ಎಂದು ನನಗೆ ತಿಳಿಸಿದ್ದು ನಾನು ಈ ಕುರಿತು ದಿಃ 21-07-2019 ರಂದು ಸಂಜೆ 4.00 ಗಂಟೆ ಸಮಯದಲ್ಲಿ ನಿಪಿ-1 ರಂತೆ ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ.

ನಂತರ ದಿಃ 22-07-2019 ರಂದು ನಮ್ಮ ಅಣ್ಣನ ಬಲಗಾಲಿಗೆ ಪೆಟ್ಟಾಗಿದ್ದಾಗಿ ಮಾತ್ರ ತಿಳಿಸಿದ್ದು ಚಾಸಾ-2 ರವರ ಬಲಗಾಲಿನ ಪಾದಕ್ಕೆ ಪೆಟ್ಟಾಗಿ ಚಾಸಾ-2 ರವರ 2 ರಿಂದ 5 ಬೆರಳುಗಳಿಗೆ ಹೆಚ್ಚಿನ ಪೆಟ್ಟಾಗಿದ್ದು 4 ಬೆರಳುಗಳು ಅಂದರೆ ಬಲಗಾಲು ಹೆಬ್ಬೆಳನ್ನು ಬಿಟ್ಟು ಉಳಿದ 4 ಬೆರಳುಗಳು ಶಾಶ್ವತವಾಗಿ ಇಲ್ಲದಂತಾಗಿದೆ ಎಂದು ನನ್ನ ಮರುಹೇಳಿಕೆಯನ್ನು ತನಿಖಾಧಿಕಾರಿಗಳ ಮುಂದೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಅಪಘಾತಕ್ಕೆ ಅರೋಪಿಯ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆಯೇ ಕಾರಣ ಎಂದರೆ ಸರಿ.

**<u>ಪಾಟೀ ಸವಾಲು ಶ್ರೀ ಕೆ.ಎಸ್.ಡಿ ಆರೋಪಿತರ ಪರ ವಕೀಲರು</u>**

ನನಗೆ ಪ್ರಸ್ತುತ 49 ವರ್ಷ ಚಾಸಾ-2 ರವರಿಗೆ 58 ವರ್ಷ ವಯಸ್ಸು. ಚಾಸಾ-2 ರವರಿಗೆ ವಯಸ್ಸಾದ ಕಾರಣ ಸಂಜೆ ಸಮಯದಲ್ಲಿ ಸರಿಯಾಗಿ ವಾಹನವನ್ನು ಚಲಾಯಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಹೆಬ್ಬಾಳು ಗೇಟ್ ನಿಂದ ಹೆಬ್ಬಾಳು ಗ್ರಾಮ, ಕಪ್ಪಡಿ ಕ್ಷೇತ್ರ ಮತ್ತು ಹೆಬ್ಬಾಳು ಬಡಾವಣೆ ಮೂರು ಊರುಗಳು ಅದೇ ರಸ್ತೆಯಲ್ಲಿ ಬರುತ್ತವೆ ಎಂದರೆ ಸರಿ.

ಹೆಬ್ಬಾಳು ಗೇಟ್ ನಿಂದ ಮುಂದೆ ಕಪ್ಪಡಿ ರಸ್ತೆ ಇದೆ. ಸದರಿ ರಸ್ತೆಯಲ್ಲಿ ಕೆರೆ ಇದೆ ಮತ್ತು ಅದು ತಿರುವಿನಿಂದ ಕೂಡಿದ್ದು ದಿನ್ನೆ ಇದೆ ಎಂದರೆ ಸರಿಯಲ್ಲ. ಕಪ್ಪಡಿ ಕ್ಷೇತ್ರದಿಂದ ಹಿಂದಿರುಗಿ ಬರುವಾಗ ಹೆಬ್ಬಾಳು ಬಡಾವಣೆಯ ಹತ್ತಿರ ಇಳಿಜಾರಿನಿಂದ ಕೂಡಿದೆ ಎಂದರೆ ಸರಿಯಲ್ಲ. ಪುಟ್ಟೇಗೌಡರ ತೆಂಗಿನ ತೋಟದ ಮುಂದೆ ಯಾವುದೇ ಮನೆ ಇರುವುದಿಲ್ಲ. ಸದರಿ ತೋಟದ 100-200 ಮೀಟರ್ ಅಂತರದಲ್ಲಿ ಮನೆಗಳು ಇವೆ ಎಂದರೆ ಸರಿಯಲ್ಲ.

ಪುಟೇಗೌಡರ ತೋಟದ 100-200 ಮೀಟರ್ ಅಂತರದಲ್ಲ ಕಾಂಟ್ರ್ಯಾಕ್ಟರಿ ಶಿವಣ್ಣ ಮತ್ತು ಶಂಕರಣ್ಣ ರವರ ಮನೆ ಇದೆ ಎಂದರೆ 500-600 ಮೀಟರ್ ಅಂತರದಲ್ಲಿದೆ. ಸದರಿ ರಸ್ತೆಯ ಎಡಭಾಗದಲ್ಲಿ ಆಶ್ರಯ ಯೋಜನೆಯ ಮನೆಗಳು ಇದೆ ಎಂದರೆ ಸರಿ. ಅಪಘಾತವಾಗಿದೆ ಎಂದು ಹೇಳಿದ ಸಂದರ್ಭದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಆರೋಪಿತರು ಇಬ್ಬರು ಹೆಬ್ಬಾಳು ಗ್ರಾಮದವರು ಎಂದರೆ ಸರಿ. 1 ನೇ ಆರೋಪಿ ಟ್ರ್ಯಾಕ್ಟರ್ ಮತ್ತು ಎಲ್ಲಾ ವಾಹನಗಳನ್ನು ಚಲಾಯಿಸುತ್ತಾನೆ ಎಂದರೆ ಸರಿ.

1ನೇ ಆರೋಪಿ ನಮ್ಮ ಗ್ರಾಮದಲ್ಲಿ ತರಕಾರಿ ಬೇಡ್ ಗಳನ್ನು ಹಾಕುತ್ತಾನೆ ಎಂದರೆ ಸರಿ. ಅದೇ ರೀತಿ ನಾವು ಸಹ ಮಾಡುತ್ತೇವೆ ಎಂದರೆ ಸರಿ. ಸದರಿ ದಿನ 1ನೇ ಆರೋಪಿ ನಿಧಾನವಾಗಿ ಓಡಿಸುತ್ತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ವೇಗವಾಗಿ ಓಡಿಸುತ್ತಿದ್ದ ಎಂದು ತಿಳಿಸಿರುತ್ತಾರೆ. ಆರೋಪಿ ನಿಧಾನವಾಗಿ ಓಡಿಸಿಕೊಂಡು ಹೋದರು ಸಹ ಚಾಸಾ-2 ರವರೆ ಬಿದ್ದು ಗಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಚಾಸಾ-2 ರವರ ಬಿದ್ದ ಕಾರಣ ಆರೋಪಿಯೇ ಖುದ್ದು ಯಾವುದೇ ತಪ್ಪು ಮಾಡದ ಕಾರಣ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿರುತ್ತಾನೆ ಎಂರದೆ ಸರಿಯಲ್ಲ. ಆರೊಪಿ ನಮ್ಮ ಗ್ರಾಮದವನಾದ ಕಾರಣ ಚಾಸಾ-2 ರವರು ಬಿದ್ದ ಸಮಯದಲ್ಲಿ ಆರೋಪಿ ಅದೇ ರಸ್ತೆಯಲ್ಲಿ ಬರುತ್ತಿದ್ದ ಕಾರಣ ಪರಿಹಾರವನ್ನು ಪಡೆಯವ ಸಲುವಾಗಿ ಸುಳ್ಳುದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ಅಣ್ಣ ಅವನೇ ಬೈಕ್ ನಿಂದ ಬಿದ್ದ ಕಾರಣ ಅವನ ಬೆರಳುಗಳಿಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಟೋಗಳನ್ನು ನಾನು ಈ ಹಿಂದೆಯೇ ನೋಡಿದ್ದ ಕಾರಣ ಅವುಗಳನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ತಪ್ಪುಮಾಡಿದೇ ಇದ್ದರೂ ಸಹ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ ಎಸ್ )**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ